ನಾನಿರಲೇ ಬೇಕು. ಒಳ್ಳೆ ಗೋಳಪ್ಪಾ ಇದು ಅಂದುಕೊಂಡು ಮತ್ತೆ ಜೀಪು ಏರಿ ಕುಳಿತ. ಸ್ವಲ್ಪ ಹೊತ್ತು ಕಳೆದು,



"ಸಾರ್" ಎಂದ ರಾಜಪ್ಪನವರಿಗೆ.

"ಏನ್ಲೇ ಮಾದೇಸ?"

"ಏನಿಲ್ಲ ಸಾರ್. ಮನೆಯಿಂದ ಫೋನು ಬಂದಿತ್ತು. ಅಪ್ಪನಿಗೆ ತುಂಬಾ ಉಷಾರಿಲ್ಲಂತೆ. ಇವತ್ತು ರಾತ್ರಿ ಹೋಗಿ, ಬೆಳಗ್ಗೆ ಬರ್ತೀನಿ ಸರ್. ಪರ್ಮಿಷನ್ ಕೊಡಿ ಸಾರ್."

"ಏ ಲೋಪರ್, ಮುಚ್ಚಕೊಂಡ್ ಕೂರಲೋ. ಆ ಎಸ್‌ಪಿ ಬೇರೆ ಯಾರಿಗೂ ರಜ ಕೊಡಂಗಿಲ್ಲ ಅಂತ ಹೇಳವ್ನೆ. ಆ ನಂಜನಗೂಡ್ ಬೇರೆ ಲಾಕ್ ಆಗದೆ. ಈ ಕಡೆಯಿಂದ ಮೆಸೇಜ್ ಮೇಲೆ ಮೆಸೇಜ್. ಎಸ್‌ಪಿ ಕಾಟನೇ ಸಾಕಾಗಿತ್ತು. ಈಗ ಐಜಿಯ ಪಿಎ ಕಿರಿಕಿರಿ ಬೇರೆ ಸುರು. ಪದೇ ಪದೇ ವಾಟ್ಸ್‌ಅಪ್ ಮೆಸೇಜ್, ವೈರಲೆಸ್ ಮೆಸೇಜ್. ನೀನಿಲ್ಲ ಅಂದ್ರೆ ಮೆಸೇಜ್ ಎಂಗ್ಲಾ ಓಗೋದು? ಇಂಗ್ಲೀಸನಾಗೇ ಊಸ್ತವೇ ಅವರೆಡು. ಅವರ ಕತೆ ಅವರು ನೋಡಕ್ತಾರೆ. ನೀನು ಇಲ್ಲೇ ಬಿದ್ದಿರು."

ಪೊಲೀಸ್ ಡ್ಯೂಟಿ ಕಥೇನೆ ಇಷ್ಟು. ಹಬ್ಬ ಬಂದ್ರೆ ಎಕ್ಸ್ಟ್ರಾ ಡ್ಯೂಟಿ. ಸ್ಟ್ರೈಕ್ ಆದ್ರೆ, ಇಂತಾ ಅಪರೂಪದ ಘಟನೆಗಳಾದ್ರೆ, ಮುಗೀತು. ಪೂರ್ತಿ ಲಾಕ್. ಡ್ಯೂಟಿ ಬಿಟ್ರೆ ಬೇರೆ ಯಾವುದೂ ಸಾಧ್ಯವಿಲ್ಲ. ಪ್ಲೇಗ್ ಹೀರೊ ಡಾ. ರೀಕ್ಸ್ ತರಾ, ನಾನು ಹಗಲು ರಾತ್ರಿ ಲಾಠಿ ಹಿಡಿದು ಡ್ಯೂಟಿ ಮಾಡಬೇಕು. ಬೇರೆ ದಾರಿ ಇಲ್ಲ ಅಂದುಕೊಂಡ.

ಲಾಠಿ ಪದ ನೆನಪಾದ ತಕ್ಷಣ, ಮಾದೇಶನಿಗೆ ಪೊಲೀಸ್ ಟ್ರೈನಿಂಗ್ ಕಾಲೇಜಿನಲ್ಲಿದ್ದ ಶ್ರೀನಿವಾಸ್ ನೆನಪಾದರು. ಒಂದು ದಿನ ಪೊಲೀಸ್ ಮ್ಯಾನುಲ್ ಕುರಿತು ಮಾತನಾಡುತ್ತಾ ಅವರು, "ಡಿಯರ್ ಟ್ರೈನೀಸ್, ಯಾವಾಗಲೂ ಒಂದು ನೆನಪಿರಲಿ. ಈ ಮ್ಯಾನುಲ್‌ಗಳ ಕುರಿತು ನಿಮಗೆ ತಿಳಿದಿರಬೇಕು. ಜೊತೆಗೆ ನೀವು ಸ್ಟೇಷನ್‌ನಲ್ಲಿ ಕೆಲಸ ಶುರುಮಾಡಿದಾಗ, ಇದರಲ್ಲಿ ಇರೋ ಎಷ್ಟೋ ವಿಚಾರಗಳು ಅಲ್ಲಿ ಕೆಲಸಕ್ಕೆ ಬರುವುದಿಲ್ಲ ಅನೋದು ತಿಳಿದಿರಲಿ. ಅಲ್ಲಿ ನಿಮಗೆ ಎಸ್‌ಐ ಹೇಳೋದೇ ರೂಲ್ಸ್. ಆಲ್‌ವೇಸ್ ಫಾಲೋ ದಿ ಆಡರ್ಸ್. ಅಂದ್ರೆ ಮುಚ್ಕೊಂಡು ಅವರು ಹೇಳ್ದಂಗೆ ಕೇಳಿ" ಅಂತ ಹೇಳಿದ್ದು ನೆನಪಾಯಿತು.

ಹೌದು. ಮ್ಯಾನುಲ್ ಪ್ರಕಾರ ನನಗೆ ರಜೆ ಕೇಳೋ ಅರ್ಹತೆ ಇದೆ. ಆದರೆ, ಡ್ಯೂಟಿ ಮಾಡೋಕೆ ಜನ ಇಲ್ಲ. ಇರಬೇಕಾಗಿರೋ ಹದಿನೈದು ಪೊಲೀಸರಲ್ಲಿ, ಕೆಲಸ ಮಾಡುತ್ತಿರುವವರು ಕೇವಲ ಒಂಬತ್ತು. ಆರು ಪೋಸ್ಟ್ ಖಾಲಿ ಇದಾವೆ. ಹಾಗಾಗಿ, ರಜೆ ಅನ್ನೋದು ಮ್ಯಾನುಲ್‌ನಲ್ಲಿ ಇರೋ ವಿಚಾರ ಮಾತ್ರ. ಜೊತೆಗೆ ಈ ರಾಜಪ್ಪ ತರಹದ ಐಲುಗಳ ಸಹವಾಸ ಬೇರೆ. ಒಮ್ಮೆ ತಲೆ ಕೊಡವಿಕೊಂಡು ಸುಮ್ಮನಾದ ಮಾದೇಶ.

ಎಷ್ಟೋ ಬಾರಿ ಈ ಕೆಲಸ ಬಿಡಬೇಕು ಅಂತ ಮಾದೇಶನಿಗೆ ಅನ್ನಿಸಿದೆ. ಆದರೆ ಬಿಟ್ಟು ಏನ್ ಮಾಡೋದು? ಎಂ.ಎ. ಮುಗಿಸಿ ಮೂರು ವರ್ಷವೇನೋ ಆಗಿದೆ. ಆದರೆ ಲೆಕ್ಚರರ್ ಪೋಸ್ಟಿಗೆ ಕಾಲೇ ಆಗಿಲ್ಲ. ಮೂರು ವರ್ಷದ ಹಿಂದೆ ಆದಷ್ಟು ಬೇಗ ಪೊಲೀಸ್ ಕೆಲಸ ಬಿಡೋ ಕನಸು ಕಂಡಿದ್ದ. ಆದರೆ ಈಗ ಇಲ್ಲಿಂದ ಹೋಗೋದು ಸುಲಭ ಅಲ್ಲ ಅನ್ನೋದು ಅವನಿಗೆ ಗೊತ್ತಾಗಿದೆ. ರಾಜಪ್ಪ ಹೇಳಿದ ಹಾಗೆ, 'ಮುಚ್ಕೊಂಡು ಕೂತ'.

ಜೀಪಿನಲ್ಲೇ ಕುಳಿತಿದ್ದ ರಾಜಪ್ಪ, "ಯೇ ಮಾದೇಸ್ ಇಳಿದು ಒಸಿ ನೋಡ್ಲೇ" ಎಂದರು. ಕೆಳಗಿಳಿದ ಮಾದೇಶ ಜೀಪಿನಿಂದ ಸ್ವಲ್ಪ ದೂರ ಸಾಗಿ ನಿಂತ. ಅಯ್ಯೀಂ ಜೀಪನ್ನು ಪಕ್ಕದಲ್ಲಿದ್ದ ಅರಳಿ ಮರದ ಕೆಳಗೆ ನಿಲ್ಲಿಸಿದ. ರಾಜಪ್ಪರಿಗೆ ಕೋಟೆ ಕಡೆಯಿಂದ ಬರುವ ರಸ್ತೆ ಕಾಣುತಿತ್ತು.